**ಓ.ಎಸ್. ನಂ. 403/2018 ಪಿ.ಡಬ್ಲೂ-1 ಹೆಸರು - ಶಿವಮೂರ್ತಿ**

**ಸಾಕ್ಷಿಯನ್ನು ದಿನಾಂಕಃ 19/12/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಪಿ.ಟಿ. 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಹುಟ್ಟಿನಿಂದ ಚೆನ್ನದ ಗುಡಿ ಹುಂಡಿ ಗ್ರಾಮದಲ್ಲಿ ಇದ್ದೇನೆ. ನನ್ನ ತಂದೆ ಮತ್ತು ತಾತ ಕೂಡ ಅದೇ ಊರಿನಲ್ಲಿ ಹುಟ್ಟಿರುವುದು. ನೀವು ಈಗ ಎಲ್ಲಿ ವಾಸವಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಸೈಟ್ ನಂಬರ್ 59 ರಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನಾನು ಊರಿನಲ್ಲಿರುವ ನನ್ನ ಪಿತ್ರಾರ್ಜಿತ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸಾಕ್ಷಿಯು ಸದರಿ ಮನೆಯಲ್ಲಿಯೂ ಇದ್ದೇನೆ ಮತ್ತು ನಿವೇಶನದಲ್ಲಿಯೂ ಇದ್ದೇನೆ ಎಂದು ನುಡಿಯುತ್ತಾರೆ. ಚೆನ್ನದ ಗುಡಿ ಹುಂಡಿ ಗ್ರಾಮದಲ್ಲಿ ನನಗೆ 4 ಕಂಬದ ತೊಟ್ಟಿ ಮನೆ ಇದೆ ಎಂದರೆ ಸಾಕ್ಷಿಯು ನನಗೆ ಕೇವಲ 3 ಅಂಕಣದ ಮನೆ ಇದೆ ಎಂದು ನುಡಿಯುತ್ತಾರೆ. ನನಗೆ ಒಬ್ಬ ಅಣ್ಣ ಮತ್ತು ಇಬ್ಬರು ಅಕ್ಕಂದಿರು. ನನ್ನ ಅಣ್ಣ ನಮ್ಮ ಊರಿನಲ್ಲಿ ಪ್ರತ್ಯೇಕವಾಗಿ ಬೇರೆ ಮನೆಯಲ್ಲಿ ಇದ್ದಾರೆ. ನನಗೆ 39 ಗುಂಟೆ ಜಮೀನು ಇದೆ. ನನಗೆ ಊರಿನಲ್ಲಿ 2 ಎಕರೆ ಜಮೀನು ಮತ್ತು ಟ್ರಾಕ್ಟರ್ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಟ್ರಾಕ್ಟರ್ ಅನ್ನು ಬಾಡಿಗೆಗೆ ತೆಗೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ 1983 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ಗುಡಿಸಲು ಹಾಕಿಕೊಂಡು ವಾಸವಿದ್ದಾರೆ ಎಂದರೆ ಸಾಕ್ಷಿಯು ನನ್ನ ನಿವೇಶನವನ್ನು ಒತ್ತುವರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯು 1995 ರಲ್ಲಿ ಮಂಡಲ ಪಂಚಾಯಿತಿಯಿಂದ ಅನುದಾನ ಪಡೆದು ಹೆಂಚಿನ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರ ನಿವೇಶನ ಸಂಖ್ಯೆ 62, ಸದರಿ ನಿವೇಶನದಲ್ಲಿ ಮನೆ ಕಟ್ಟಲು ಹಣ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಮನೆ ಕಟ್ಟಲು ಕಟ್ಟಡ ಪರವಾನಿಗೆ ಪಡೆದಿದ್ದಾರೆ ಎಂದರೆ ಸರಿಯಲ್ಲ. 2000 ನೇ ಸಾಲಿನಲ್ಲಿ ಪುನಃ 1 ನೇ ಪ್ರತಿವಾದಿಗೆ ಸರ್ಕಾರದಿಂದ 50,000/- ರೂ ಹಣ ಮಂಜೂರು ಮಾಡಿದ್ದು, 1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೋಟೋ ತೋರಿಸಿ ದಾವಾ ಸ್ವತ್ತಿನಲ್ಲಿ ಈ ಮನೆ ಇದೆಯೇ ಎಂದು ಕೇಳಿದ್ದಕ್ಕೆ ಸಾಕ್ಷಿಯು ಅದು ಸೈಟ್ ನಂಬರ್ 62 ರಲ್ಲಿ ಇದೆ ಎಂದು ನುಡಿಯುತ್ತಾರೆ. ಗುರುತಿಸುವಿಕೆಯ ಸಲುವಾಗಿ ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ಈಗಲೂ ನನ್ನ ತಾಯಿಯ ಹೆಸರಿನಲ್ಲಿಯೇ ಖಾತೆ ಇದೆ ಎಂದರೆ ಸರಿ. ಯಾವತ್ತಿಗೂ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿ ಇರದೇ ಇದ್ದರೂ ಕೂಡ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1 ಮತ್ತು 2 ನೇ ಪ್ರತಿವಾದಿಯರು 1983 ರಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಮಗೆ ಸಾಕಷ್ಟು ಆಸ್ತಿಗಳು ಇರುವುದರಿಂದ ಪಂಚಾಯಿತಿಯಿಂದ ನಿವೇಶನ ನೀಡಲು ಬರುವುದಿಲ್ಲ ಎಂದು ನನ್ನ ತಂದೆಯ ಹೆಸರನ್ನು ಫಲಾನುಭವಿಗಳ ಪಟ್ಟಿಯಿಂದ ತೆಗೆದುಹಾಕಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ತಾಯಿ ತೀರಿಹೋದ ನಂತರ ನಿಮ್ಮ ಹೆಸರಿಗೆ ಖಾತೆಯನ್ನು ಏಕೆ ಮಾಡಿಸಿಕೊಳ್ಳಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಗ್ರಾಮ ಪಂಚಾಯಿತಿಗೆ ನಾವು ಅರ್ಜಿ ನೀಡಿದಾಗ ಅವರು ತಡ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ಹೆಸರಿಗೆ ಖಾತೆ ಇರುವುದರಿಂದ ನಮಗೆ ಖಾತೆ ಮಾಡಲು ಬರುವುದಿಲ್ಲ ಎಂದು ಗ್ರಾಮ ಪಂಚಾಯಿತಿಯವರು ಹೇಳಿದ್ದರೂ ಕೂಡ ಅದನ್ನು ಮರೆಮಾಚಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಹಕ್ಕು ಪತ್ರದ 10 ನೇ ಷರತ್ತನ್ನು ಉಲ್ಲಂಘಿಸಿದ್ದೇನೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಅಕ್ರಮವಾಗಿ ನಮ್ಮ ಸ್ವತ್ತನ್ನು ಅತಿಕ್ರಮಿಸಿದ್ದಾನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ವಿದ್ಯುತ್ ಶಕ್ತಿ ಸಂಪರ್ಕ ಪಡೆದಿಲ್ಲ. ದಾವಾ ಸ್ವತ್ತಿಗೆ ಕುಡಿಯುವ ನೀರಿನ ಸಂಪರ್ಕ ಪಡೆದಿದ್ದೇನೆ. ನೀರಿನ ಸಂಪರ್ಕ ಪಡೆದಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ವಿದ್ಯುತ್ ಶಕ್ತಿ ಸಂಪರ್ಕ ಮತ್ತು ನಲ್ಲಿ ಸಂಪರ್ಕ ಪಡೆದು ಇಲ್ಲಿಯವರೆಗೂ ವಾಸವಾಗಿದ್ದಾನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**